# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17೮೪೫ ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: 03-04-2017

| NDCPS ಅಧಿಕಾರಿಗಳ / ನೌಕರರ ವೈಯಕ್ತಿಕ ಗಮನಕ್ಕೆ |
|---|

### ಸುತ್ತೋಲೆ

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ / ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ (PPAN) ಖಾತೆಯಲ್ಲಿ ಜಮಾ ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ಪಡೆದು ಪರಿಶೀಲಿಸಿಕೊಳ್ಳುವ ಬಗ್ಗೆ.

ಉಲ್ಲೇಖ ೧. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 4/ಪಿಇಟಿ 2005 ದಿನಾಂಕ 31-03-2003

೨. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ.14/ 4977/2005-06 ದಿನಾಂಕ 05-07-2007

೩. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ 4977/2005-06 ದಿನಾಂಕ 21-08-2007

೪. ಈ ಕಛೇರಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ//ಬಿ. B93/ 35989/ 2016-17 ದಿನಾಂಕ 21-02-2017

೫. ಈ ಕಛೇರಿ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ//ಬಿ. B93/ 35989/ 2016-17 ದಿನಾಂಕ 03-03-2017

*****

ಉಲ್ಲೇಖ 4 ಮತ್ತು 5 ರಲ್ಲಿರುವ ಈ ಕಛೇರಿ ಸುತ್ತೋಲೆಗಳಲ್ಲಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ / ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ (PPAN) ಖಾತೆಯಲ್ಲಿ ಜಮಾ

EE(T) 3/4/17 AEE-4/AE-1 3/4/2017

ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ತಂತ್ರಾಂಶದಿಂದ ಪಡೆದು ಅದರ ನಿಖರತೆಯನ್ನು ಪರಿಶೀಲಿಸಿಕೊಳ್ಳುವ ಬಗ್ಗೆ ಮತ್ತು ವ್ಯತ್ಯಾಸಗಳೇನಾದರೂ ಕಂಡುಬಂದಲ್ಲಿ ಅದರ ವಿವರಗಳನ್ನೊಳಗೊಂಡ ಮನವಿ ಪತ್ರವನ್ನು ಸಮುಚಿತ ಮಾರ್ಗದಲ್ಲಿ ಲೆಕ್ಕ ಘಟಕದ ಷರಾದೊಂದಿಗೆ ಕೆಇಎನ್‌ಡಿಸಿಪಿಎಸ್ ಘಟಕದ ಗಮನಕ್ಕೆ ತಂದಲ್ಲಿ ಅದನ್ನು ಪರಿಶೀಲಿಸಿ ಅಗತ್ಯವಿದ್ದರೆ ಸರಿಪಡಿಸಲಾಗುವುದು ಎಂದೂ ಸಹ ತಿಳಿಸಲಾಗಿತ್ತು.

ಕೆಲವು ನೌಕರರು ಅವರು ಗಮನಿಸಿದ ವ್ಯತ್ಯಾಸವನ್ನು ಸರಿಪಡಿಸಲು ಕೋರಿ ಸಮುಚಿತ ಮಾರ್ಗದಲ್ಲಿ / ನೇರವಾಗಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಲ್ಲಿಸಲಾದ ಅರ್ಜಿಗಳನ್ನು ಪರಿಶೀಲಿಸಲಾಗಿ ಬಹುತೇಕ ಅರ್ಜಿಗಳು ನೌಕರರ ಅನುಬಂಧ – 1 ಕ್ಕೆ ಸಂಬಂಧಿಸಿರುತ್ತದೆ. ಅಂದರೆ ಹೆಸರಿನಲ್ಲಿ ಅಕ್ಷರಗಳ ವ್ಯತ್ಯಾಸ (Spelling mistakes), ನೇಮಕಗೊಂಡಾಗ ಹೊಂದಿದ್ದ ಹುದ್ದೆಯನ್ನೇ ಈಗಲೂ ಮುಂದುವರೆಸಿರುವುದು, ನಾಮ ನಿರ್ದೇಶನ ಬದಲಾಯಿಸಬೇಕಿರುವುದು ಇವೇ ಮೊದಲಾದವುಗಳನ್ನು ಒಳಗೊಂಡಿರುತ್ತದೆ.

ಸದರಿ ವಿಷಯದ ಬಗ್ಗೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರ ಗಮನಕ್ಕೆ ತರಬಯಸುವುದೇನೆಂದರೆ, ಕೆಇಎನ್‌ಡಿಸಿಪಿಎಸ್ ಘಟಕವು ಪ್ರಸ್ತುತ ಪಿಂಚಣಿ ವಂತಿಗೆಗೆ ಸಂಬಂಧಿಸಿದ ವ್ಯತ್ಯಾಸಗಳನ್ನು ಸರಿಪಡಿಸುವುದಕ್ಕೆ ಆದ್ಯತೆ ನೀಡುತ್ತಿದ್ದು ಅನುಬಂಧ – 1 ಕ್ಕೆ ಸಂಬಂಧಿಸಿರುವ ವಿಷಯಗಳನ್ನು ನಂತರದಲ್ಲಿ ಸರಿಪಡಿಸಲಾಗುವುದು. ಆದ್ದರಿಂದ ಸದರಿ ಯೋಜನೆಯ ಅಧಿಕಾರಿಗಳು / ನೌಕರರು ವಿವರಗಳನ್ನು ಸರಿಪಡಿಸುವವರೆಗೂ ವ್ಯವಧಾನದಿಂದ ಇರಬೇಕೆಂದು ಕೋರಲಾಗಿದೆ.

ಈ ಸುತ್ತೋಲೆಯನ್ನು ಲೆಕ್ಕ ಘಟಕ ಮತ್ತು ತಮ್ಮ ವ್ಯಾಪ್ತಿಯ ಇತರೆ ಕಚೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಕಟಿಸಿ ಸಂಬಂಧಿಸಿದ ಎಲ್ಲಾ ನೌಕರರಿಗೆ ವಿಷಯ ತಿಳಿಸಲು ವ್ಯವಸ್ಥೆ ಮಾಡುವಂತೆ ಕೋರಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ವಿಸಕಂಗಳು,

೨. ಆರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಲ್ಲಾ ವಿಸಕಂಗಳು,

೩. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೪. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೫. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** **http:/www.kptcl.com / eprasarana** ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅ.ಅ (ಐ.ಟಿ ಮತ್ತು ಎಂ ಐ ಎಸ್) ರವರು ವೆಬ್ ಸೈಟ್ ನಲ್ಲಿ ಪ್ರಕಟಿಸಲು ವ್ಯವಸ್ಥೆ ಮಾಡುವಂತೆ ಕೋರಲಾಗಿದೆ.

೬. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು

೭. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೮. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು

೯. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು

೧೦. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು